ಪ್ರ-330 (104)

**ಕರ್ನಾಟಕ ವಿಧಾನ ಪರಿಷತ್ತಿನ ಮಾನ್ಯ ಸದಸ್ಯರಾದ ಶ್ರೀ ಶಶೀಲ್ ಜಿ. ನಮೋಶಿ ಇವರ ನಿಯಮ 330ರ ಅಡಿಯಲ್ಲಿ ನೀಡಿರುವ ಸೂಚನಾ ಪತ್ರಕ್ಕೆ ಉತ್ತರಿಸುವ ಕುರಿತು.**

## ವಿಷಯ

ಕಲ್ಯಾಣ ಕರ್ನಾಟಕ ವಿಭಾಗದ ಸರ್ಕಾರಿ ಪ್ರಾಥಮಿಕ ಮತ್ತು ಪ್ರೌಢ ಶಾಲೆಗಳಲ್ಲಿ ಮಕ್ಕಳ ಶಿಕ್ಷಕರ ಅನುಪಾತದಲ್ಲಾದ (ಪಿಟಿಆರ್) ತಾರತಮ್ಯ ಹೋಗಲಾಡಿಸುವ ಕುರಿತು ಪ್ರಸ್ತಾಪಿಸುವುದು.

## ಉತ್ತರ

**ಕಲ್ಯಾಣ ಕರ್ನಾಟಕ ವಿಭಾಗದ ಸರ್ಕಾರಿ ಪ್ರಾಥಮಿಕ ಮತ್ತು ಪ್ರೌಢ ಶಾಲೆಗಳಲ್ಲಿ ಮಕ್ಕಳ ಶಿಕ್ಷಕರ ಅನುಪಾತದಲ್ಲಾದ (ಪಿಟಿಆರ್) ತಾರತಮ್ಯ ಕುರಿತು ಈ ಕೆಳಕಂಡಂತೆ ಅವಗಾಹನೆಗೆ ತರಲಾಗಿದೆ:**

**ಪ್ರಾಥಮಿಕ ಶಾಲೆಗಳ ಪಿಟಿಆರ್ :**

1. ವಿದ್ಯಾರ್ಥಿಗಳ ಮತ್ತು ಶಿಕ್ಷಕ ಅನುಪಾತ: 2019-20 ಎಸ್ ಎಟಿ ಎಸ್ ಅಂಕಿ ಸಂಖ್ಯೆಗಳನ್ನು ಗಮನಿಸಿದಾಗ ಪ್ರಾಥಮಿಕ ವಿದ್ಯಾರ್ಥಿಗಳ ಮತ್ತು ಶಿಕ್ಷಕ ಅನುಪಾತ ಈ ಕೆಳಕಂಡಂತಿದೆ.

   ಪ್ರಾಥಮಿಕ ಶಾಲೆಗಳಲ್ಲಿನ ವಿದ್ಯಾರ್ಥಿಗಳ ಮತ್ತು ಶಿಕ್ಷಕ ಅನುಪಾತದ ಕೋಷ್ಟಕ:

| ಜಿಲ್ಲೆಗಳು | ಮಂಜೂರಾದ ಹುದ್ದೆಗಳು | ಕಾರ್ಯ ನಿರ್ವಹಿಸುತ್ತಿರುವ ಹುದ್ದೆಗಳು | ಮಕ್ಕಳ ಸಂಖ್ಯೆ | ಮಂಜೂರಾದ ಹುದ್ದೆಗಳ ಪಿ ಟಿ ಅರ್ |
|---|---|---|---|---|
| ಬಳ್ಳಾರಿ | 8359 | 6747 | 234103 | 28.01 |
| ಬೀದರ | 6812 | 5542 | 100048 | 14.69 |
| ಕಲಬುರಗಿ | 10077 | 7999 | 203041 | 20.15 |
| ಕೊಪ್ಪಳ | 6008 | 4723 | 152588 | 25.40 |
| ರಾಯಚೂರು | 8607 | 6373 | 196826 | 22.87 |
| ಯಾದಗಿರಿ | 5072 | 3575 | 136982 | 27.01 |
| ಒಟ್ಟು | 44935 | 34959 | 1023588 | 23.02 |
| ರಾಜ್ಯದ ಸರಾಸರಿ | 1,88,540 | 1,46,671 | 34,91,393 | 18.50 |

(ಮೂಲ :ಎಸ್.ಎ.ಟಿ.ಎಸ್ 2019-20)

ಈ ಮೇಲಿನಂತೆ ಕಲ್ಯಾಣ ಕರ್ನಾಟಕ ವಿಭಾಗದ ಜಿಲ್ಲೆಗಳ ಸರಾಸರಿ ಪಿಟಿಆರ್ 23.02 ಇದ್ದು. ರಾಜ್ಯದ ಸರಾಸರಿ ಪಿಟಿಆರ್ 18.50 ಇರುತ್ತದೆ.

ಪ್ರಾಥಮಿಕ ಶಾಲೆಗಳಲ್ಲಿ ಇರಬೇಕಾದ ಪ್ರಾಥಮಿಕ ಹಂತದ ಪಿಟಿಆರ್ 1:30 ಇರುತ್ತದೆ. ಆದುದರಿಂದ, ಕಲ್ಯಾಣ ಕರ್ನಾಟಕ ವಿಭಾಗದ ಜಿಲ್ಲೆಗಳಲ್ಲಿ ನಿಗದಿಪಡಿಸಿದ ಪ್ರಮಾಣಕ್ಕಿಂತ ಕಡಿಮೆ ದರದಲ್ಲಿ ಪಿಟಿಆರ್ ಇರುವುದನ್ನು ಗಮನಿಸಬಹುದು.

ಆದಾಗ್ಯೂ, ರಾಜ್ಯದ ಇತರೆ ಜಿಲ್ಲೆಗಳಿಗೆ ಹೋಲಿಸಿದಲ್ಲಿ ಕಲ್ಯಾಣ ಕರ್ನಾಟಕದ ಜಿಲ್ಲೆಗಳಲ್ಲಿ ಹೆಚ್ಚಿನ ಪಿಟಿಆರ್ ಇದ್ದುದರಿಂದ ಸದರಿ ವ್ಯತ್ಯಾಸವನ್ನು ಸರಿದೂಗಿಸಲು ಶಿಕ್ಷಕರ ಹುದ್ದೆಗಳ ಮರುಹಂಚಿಕೆ(Rationalization) ಮೂಲಕ ಕ್ರಮಕೈಗೊಳ್ಳಬೇಕಾಗುತ್ತದೆ.

ಸದರಿ ಮರುಹಂಚಿಕೆ ಪ್ರಕ್ರಿಯೆ(Rationalization) ಪ್ರತಿ ಪರ್ಯಾಯ ವರ್ಷದಲ್ಲಿ ಕೈಗೊಳ್ಳಬೇಕು ಎಂದು ನಿಯಮವಿರುತ್ತದೆ. ಪ್ರಸ್ತುತ ವರ್ಷ ವರ್ಗಾವಣೆ ಪ್ರಕ್ರಿಯೆ ನಡೆಯುತ್ತಿರುವುದರಿಂದ Rationalization ಪ್ರಕ್ರಿಯೆಯನ್ನು ಕೈಗೊಳ್ಳಬಾರದು ಎಂದು ಸರ್ಕಾರದ ಆದೇಶವಾಗಿರುತ್ತದೆ. ಆದ್ದರಿಂದ, ಸದರಿ ತಾರತಮ್ಯವನ್ನು ಹೋಗಲಾಡಿಸಲು ಪಿಟಿಆರ್ ಅನುಸಾರ ಶಿಕ್ಷಕರ ಹುದ್ದೆಗಳ ಮರುಹಂಚಿಕೆ ಮಾಡುವುದರ ಮೂಲಕ ಹಂತ ಹಂತವಾಗಿ ಕ್ರಮ ಕೈಗೊಳ್ಳಲಾಗುವುದು.

ಸದರಿ ಪ್ರಕ್ರಿಯೆಯನ್ನು ಈ ಕೆಳಗಿನಂತೆ ಕೈಗೊಳ್ಳಲಾಗುವುದು.

1. ಆಯಾ ತಾಲ್ಲೂಕು/ಜಿಲ್ಲೆಗಳಲ್ಲಿ ಶಿಕ್ಷಕರ ಹುದ್ದೆಗಳು ಹೆಚ್ಚುವರಿಯಾಗಿರುವ ಶಾಲೆಗಳಿಂದ ಶಿಕ್ಷಕರ ಹುದ್ದೆಗಳು ಮಕ್ಕಳ ಸಂಖ್ಯೆ ಅನುಸಾರ ಅವಶ್ಯವಿರುವ ಶಾಲೆಗಳಿಗೆ ಮೊದಲು ಸ್ಥಳಾಂತರಿಸಲಾಗುವುದು.
2. ತದನಂತರ, ಖಾಲಿಯಿರುವ ಕಲ್ಯಾಣ ಕರ್ನಾಟಕ ವಿಭಾಗದ ಯಾವುದೇ ಜಿಲ್ಲೆಯಲ್ಲಿ ಶಿಕ್ಷಕರ ಹುದ್ದೆಗಳು ಹೆಚ್ಚುವರಿಯಾಗಿದ್ದಲ್ಲಿ ಆ ಹುದ್ದೆಗಳನ್ನು ಕಲ್ಯಾಣ ಕರ್ನಾಟಕದ ಶಿಕ್ಷಕರ ಹುದ್ದೆಗಳು ಅವಶ್ಯವಿರುವ ಇತರೆ ಜಿಲ್ಲೆಗಳಿಗೆ ಸ್ಥಳಾಂತರಿಸಲಾಗುವುದು.
3. ತದನಂತರ, ರಾಜ್ಯದ ಇತರೆ ಜಿಲ್ಲೆಗಳಲ್ಲಿ ಹೆಚ್ಚುವರಿಯಾದ ಶಿಕ್ಷಕರ ಹುದ್ದೆಗಳನ್ನು ಕಲ್ಯಾಣ ಕರ್ನಾಟಕದ ಶಿಕ್ಷಕರ ಹುದ್ದೆಗಳು ಅವಶ್ಯವಿರುವ ಜಿಲ್ಲೆಗಳಿಗೆ ಸ್ಥಳಾಂತರಿಸಲಾಗುವುದು.

**ಪ್ರೌಢ ಶಾಲೆಗಳ ಪಿಟಿಆರ್ :**

ಪ್ರೌಢ ಶಾಲೆಗಳಲ್ಲಿ ಶಿಕ್ಷಕ ವಿದ್ಯಾರ್ಥಿ ಅನುಪಾತ (PTR) ಪರಿಗಣಿಸಲಾಗುವುದಿಲ್ಲ. ಬದಲಾಗಿ, ವಿಷಯವಾರು ಶಿಕ್ಷಕರನ್ನು ವಿಭಾಗಗಳ ಅನುಸಾರವಾಗಿ ಒದಗಿಸಲಾಗುತ್ತದೆ.

ಪ್ರಸ್ತುತ, ಪ್ರೌಢ ಶಾಲೆಗಳಲ್ಲಿ ವಿದ್ಯಾರ್ಥಿಗಳ ಮತ್ತು ವಿಭಾಗದ ಅನುಪಾತ 1:70 ಇರುತ್ತದೆ (ಒಂದು ವಿಭಾಗಕ್ಕೆ 70 ವಿದ್ಯಾರ್ಥಿಗಳು ಎಂದು ನಿಗಧಿಪಡಿಸಲಾಗಿದೆ).

ಸಿಬ್ಬಂದಿ ಸ್ತರ ವಿನ್ಯಾಸದಂತೆ (Staff Pattern) 03 ರಿಂದ 05 ವಿಭಾಗಗಳಿರುವ ಪ್ರೌಢ ಶಾಲೆಗಳಲ್ಲಿ ಕನಿಷ್ಠ 07 ಜನ ಶಿಕ್ಷಕರನ್ನು ನೀಡಲು ಅವಕಾಶ ಇರುತ್ತದೆ.

06 ಅಥವಾ 06ಕ್ಕಿಂತ ಹೆಚ್ಚು ವಿಭಾಗಗಳಿದ್ದಲ್ಲಿ ಮುಖ್ಯ ಶಿಕ್ಷಕರನ್ನು ಹೊರತುಪಡಿಸಿ ಪ್ರತಿ ವಿಭಾಗಕ್ಕೆ 1 ½ ಶಿಕ್ಷಕರಂತೆ ಅಧಿಕ ಶಿಕ್ಷಕರನ್ನು ನೀಡಲು ಅವಕಾಶ ಇರುತ್ತದೆ. ಸದರಿ ಹುದ್ದೆಗಳನ್ನು ಈ ಕೆಳಕಂಡ ಕೋಷ್ಟಕದಂತೆ ನೀಡಲು ಅವಕಾಶವಿದೆ.

| ವಿಭಾಗಗಳ ಸಂಖ್ಯೆ | ಗಣಿತ/ವಿಜ್ಞಾನ (ಪಿಸಿಎಂ) | ವಿಜ್ಞಾನ (ಸಿಬಿಝಡ್) | ಕಲಾ | ಆಂಗ್ಲ ಭಾಷೆ | ಕನ್ನಡ ಭಾಷೆ | ಹಿಂದಿ ಭಾಷೆ | ದೈಹಿಕ ಶಿಕ್ಷಣ ಶಿಕ್ಷಕರು ಗ್ರೇ-1 | ವಿಶೇಷ ಶಿಕ್ಷಕರು (ಸಂಗೀತ, ನೃತ್ಯ, ನಾಟಕ, ಚಿತ್ರಕಲೆ, ವೃತ್ತಿ) | ಒಟ್ಟು |
|---|---|---|---|---|---|---|---|---|---|
| 6 | 2 | 1 | 1 | 1 | 1 | 1 | 1 | 1 | 9 |
| 7 | 2 | 1 | 2 | 1 | 2 | 1 | 1 | 1 | 11 |
| 8 | 3 | 1 | 2 | 1 | 2 | 1 | 1 | 1 | 12 |
| 9 | 3 | 1 | 2 | 2 | 2 | 2 | 1 | 1 | 14 |
| 10 | 3 | 1 | 2 | 2 | 2 | 2 | 2 | 1 | 15 |
| 11 | 4 | 1 | 3 | 2 | 2 | 2 | 2 | 1 | 17 |
| 12 | 4 | 1 | 2 | 2 | 3 | 2 | 2 | 2 | 18 |
| 13 | 4 | 2 | 3 | 2 | 3 | 2 | 2 | 2 | 20 |
| 14 | 4 | 2 | 3 | 3 | 3 | 2 | 2 | 2 | 21 |
| 15 | 5 | 2 | 4 | 3 | 3 | 2 | 2 | 2 | 23 |

ಈ ಮೇಲಿನ ಅಂಶಗಳಂತೆ ರಾಜ್ಯದ ಎಲ್ಲಾ ಪ್ರೌಢ ಶಾಲೆಗಳಲ್ಲಿನ ಶಿಕ್ಷಕರ ವಿಭಾಗಗಳು ಮತ್ತು ಮಂಜೂರಾದ ಶಿಕ್ಷಕರ ಹುದ್ದೆಗಳ ಅಂಕಿ ಅಂಶಗಳನ್ನು ವಿಶ್ಲೇಷಿಸಿ ಪ್ರೌಢ ಶಾಲೆಗಳಲ್ಲಿಯೂ ಸಹ ಈ ಮೇಲೆ ಪ್ರಾಥಮಿಕ ಶಾಲೆಗಳ ಸಂದರ್ಭದಲ್ಲಿ ವಿವರಿಸಿದಂತೆ ಹಂತ ಹಂತವಾಗಿ ಶಿಕ್ಷಕರ ಮರು ಹಂಚಿಕೆ (Rationalization) ಪ್ರಕ್ರಿಯೆಯನ್ನು ಕೈಗೊಳ್ಳುವ ಮೂಲಕ ಕಲ್ಯಾಣ ಕರ್ನಾಟಕ ಜಿಲ್ಲೆಗಳು ಒಳಗೊಂಡಂತೆ ರಾಜ್ಯದ ಪ್ರೌಢ ಶಾಲೆಗಳಲ್ಲಿನ ಶಿಕ್ಷಕರ ಹುದ್ದೆಗಳ ಮಂಜೂರಾತಿಯಲ್ಲಿ ತಾರತಮ್ಯವನ್ನು ಹೋಗಲಾಡಿಸಲು ಕ್ರಮಕೈಗೊಳ್ಳಲಾಗುವುದು.

**ಇಪಿ 275 ಪಿಎಂಸಿ 2021**

**(ಬಿ.ಸಿ. ನಾಗೇಶ್)**
**ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಹಾಗೂ ಸಕಾಲ ಸಚಿವರು.**